# 4

# ಬುದ್ಧಿ ಶಕ್ತಿ ಮತ್ತು ಮನಸ್ಸಾಕ್ಷಿ

## ಬುದ್ಧಿ ಶಕ್ತಿ

ಚಲಿಸುವ ಚಂದ್ರನು ಸಂಗತಿಗಳನ್ನು ಚಲಿಸುವಂತೆ ಮಾಡಲು ಶಕ್ತನಾಗಿರುವ ನಿರ್ಮಾಣಿಕನನ್ನು ದೃಢಪಡಿಸುವನು, ಹಾಗೂ ಜೀವಿಸುವ ಸಂಗತಿಗಳು ಜೀವಿಸುವ ನಿರ್ಮಾಣಿಕನನ್ನು ದೃಢಪಡಿಸುವವು. ವಾಸ್ತವಿಕತೆಯ ಇನ್ನೊಂದು ಮಟ್ಟವು - ಭೌತವಸ್ತುವಿಗಿಂತ ಶ್ರೇಷ್ಠವಾದದ್ದೂ, ಚಲನೆಗಿಂತ ಶ್ರೇಷ್ಠವಾದದ್ದೂ, ಮತ್ತು ಜೀವಕ್ಕಿಂತ ಶ್ರೇಷ್ಠವಾದದ್ದೂ - ಬುದ್ಧಿ ಶಕ್ತಿಯಾಗಿದೆ. ಬುದ್ಧಿ ಶಕ್ತಿಯನ್ನು ಕೊಡಲು ಸಾಮರ್ಥ್ಯವುಳ್ಳ ಜೀವಿಯನ್ನು ತಾನೇ ಬುದ್ಧಿ ಅಲ್ಲದವನಾಗಿದ್ದಾನೆ ಎಂದು ಹೇಳುವುದನ್ನು ಸ್ಪಷ್ಟವಾಗಿ ಯೋಚಿಸುವುದು ಎಂದು ಕರೆಯಲ್ಪಡಲಾರದು.

ಮಾನವ ಬುದ್ಧಿಶಕ್ತಿಯು, ಜೀವವು ಭೌತದ್ರವ್ಯಕ್ಕೆ ಹೆಚ್ಚು ಶ್ರೇಷ್ಠವಾದದ್ದಾಗಿರುವಷ್ಟೇ, ಜೀವಕ್ಕೆ ಹೆಚ್ಚು ಶ್ರೇಷ್ಠವಾದದ್ದಾಗಿರುತ್ತದೆ. ತನ್ನ ತಿಳಿಯದ ಸಾಮರ್ಥ್ಯದಿಂದ ಮನುಷ್ಯನ ಮನಸ್ಸು ಆಶ್ಚರ್ಯವಾದದ್ದಾಗಿದೆ. ಒಬ್ಬ ರಶ್ಯಿಯೆನ್ ಪಂಡಿತ, ಐವಾನ ಯೆಫ್ರೆಮೊವ್, ಹೀಗೆ ಬರೆದಿದ್ದಾನೆ:

> ಮಾನವ ವಿಜ್ಞಾನ, ಮನೋವಿಜ್ಞಾನ ತರ್ಕಶಾಸ್ತ್ರ ಮತ್ತು ಶರೀರ ವಿಜ್ಞಾನದಲ್ಲಿ ಕೊನೆಯ ಕಂಡು ಹಿಡಿಯುವಿಕೆಗಳು ಮಾನವ ಮನಸ್ಸಿನ ಸಾಮರ್ಥ್ಯವು ಬಹಳ ದೊಡ್ಡದಾಗಿದೆಯೆಂದು ತೋರಿಸುತ್ತದೆ. ಆಧುನಿಕ ವಿಜ್ಞಾನವು ಮಾನವ ಮೆದುಳಿನ ರಚನೆ ಮತ್ತು ಕಾರ್ಯದ ಬಗ್ಗೆ ಕೆಲವೊಂದು ತಿಳುವಳಿಕೆಯನ್ನು ನಮಗೆ ಕೊಟ್ಟಕೂಡಲೇ, ಅದರ ಅಪಾರವಾದ ಕಾದಿರಿಸಿಕೊಳ್ಳುವ ಸಾಮರ್ಥ್ಯದ ಬಗ್ಗೆ ಆಶ್ಚರ್ಯಚಕಿತರಾದೆವು, ಮನುಷ್ಯನು, ಕೆಲಸ ಮತ್ತು ಜೀವನದ ಸರಿಸಮವಾದ ಪರಿಸ್ಥಿತಿಗಳಲ್ಲಿ ತನ್ನ ಯೋಚಿಸುವ ಸಾಧನದ ಚಿಕ್ಕ ಭಾಗವನ್ನು ಮಾತ್ರ ಉಪಯೋಗಿಸುವನು. ನಾವು ನಮ್ಮ ಮೆದುಳನ್ನು ಅದರ ಸಾಮರ್ಥ್ಯದ ಕೇವಲ ಅರ್ಧ ಭಾಗದಷ್ಟನ್ನು ಕಾರ್ಯಮಾಡಲು ಒತ್ತಾಯಿಸಲು ನಾವು ಶಕ್ತರಾದರೆ, ನಾವು ಯಾವುದೇ ತೊಂದರೆಯಿಲ್ಲದೆ, 40 ಭಾಷೆಗಳನ್ನು ಕಲಿಯ ಬಹುದು, ಮೊದಲ ಪುಟದಿಂದ ಕೊನೆಯ ಪುಟದ ವರೆಗೆ ಇಡೀ ಎನ್‌ಸೈಕ್ಲೊಪಿಡಿಯಾವನ್ನು ಕಂಠಪಾಠ ಮಾಡಬಹುದು ಮತ್ತು ಒಂದು ಡಜನ್ ಕಾಲೇಜಗಳ ಅವಶ್ಯಕ ಕೋರ್ಸುಗಳನ್ನು ಪೂರ್ಣಗೊಳಿಸ ಬಹುದು.[1]

ಮಾನವ ಮೆದಳು, ಇಂಟರ್ ಕಮ್ಯೂನಿಕೇಶನ್‌ದ ಹದಿನಾಲ್ಕು ಬಿಲಿಯನ್ ಯುನಿಟ್‌ಗಳೊಂದಿಗೆ ಒಂದು ಸ್ವಾಭಾವಿಕವಾದ ಕಂಪ್ಯೂಟರ್ ಆಗಿರುತ್ತದೆ ಮತ್ತು ವಿಚಿತ್ರ ವಾಗಿ, ಸೃಷ್ಟಿಯ ಕಾರ್ಯಾಚರಣೆಯಲ್ಲಿ ಆಕಸ್ಮಿಕಗಳ ಸರಣಿಯಿಂದ ಬಂದಿದೆಯೆಂದು

ಪಂಡಿತರಿಂದ ಯೋಚಿಸಲ್ಪಟ್ಟಿದೆ. ಫ್ರೆಂಚ್ ತತ್ವಜ್ಞಾನಿ ಹಾಗೂ ಗಣಿತ ಶಾಸ್ತ್ರಜ್ಞ ಬ್ಲೇಜ ಪಾಸ್ಕಲ್‌ನು ಹೀಗೆ ಬರೆದಿದ್ದಾನೆ, "ಮನುಷ್ಯನು ಒಂದು ಗಲಗು ಆಗಿದ್ದಾನೆ, ಸೃಷ್ಟಿಯಲ್ಲಿ ಅತೀ ಬಲಹೀನವಾದ ವಸ್ತು; ಆದರೆ ಅವನು ಯೋಚಿಸುವ ಗಲಗು ಆಗಿದ್ದಾನೆ, ... ವಿಶ್ವವು ಅವನನ್ನು ಕೊಲ್ಲಬಹುದಾದರೂ, ಮನುಷ್ಯನು ತನ್ನನ್ನು ಕೊಲ್ಲುವದಕ್ಕಿಂತ ಹೆಚ್ಚಾಗಿ ಉತ್ತಮ ಶೀಲನಾಗಿರುತ್ತಾನೆ. ಯಾಕಂದರೆ ಅವನು ತಾನು ಸಾಯುತ್ತೇನೆ ಎಂದು ಕೇಳಿರುವನು; ಮತ್ತು ವಿಶ್ವವು ಅವನ ಮೇಲಿರುವದರ ಲಾಭವು ವಿಶ್ವವು ಏನನ್ನೂ ತಿಳಿಯದಿರುವುದು. ಹೀಗೆ ಗೌರವವು ಯೋಚನೆಯಲ್ಲಿ ಒಳಗೊಂಡಿರುತ್ತದೆ."

ಮನುಷ್ಯನ ಮನಸ್ಸಿನ ಸಮರ್ಥತೆಯು ಚಾರ್ಲಸ್ ಡಾರ್ವಿನ್‌ನನ್ನು ದೇವವಾದಿಯನ್ನಾಗಿ ಮಾರ್ಪಡಿಸುವದರಲ್ಲಿತ್ತು. "ಮಾನವನ ಮೆದುಳಿಗೆ" ಬಹಳ ಹಿಂದಕ್ಕೆ ಮತ್ತು ಭವಿಷ್ಯದಲ್ಲಿ ಬಹಳ ದೂರಕ್ಕೆ ನೋಡುವ ಅದ್ಭುತಕರವಾದ ಶಕ್ತಿಯಿರುವುದು, "ಪ್ರಥಮ ಕಾರಣಕ್ಕೆ ಮನುಷ್ಯನಿಗೆ ಸಮಾನವಾದ ಬುದ್ಧಿಯುಳ್ಳ ಮನಸ್ಸು" ಇರುವುದೆಂದು ಅವನನ್ನು ಒಪ್ಪಿಸುವಂತೆ ಒತ್ತಾಯ ಮಾಡಿತೆಂದು ಡಾರ್ವಿನ್ ಬರೆದನು. "ನಾನು ದೇವವಾದಿ ಎಂದು ಕರೆಯಲ್ಪಡಲು ಯೋಗ್ಯನಾಗಿದ್ದೇನೆ" ಎಂದು ಅವನು ಹೇಳಿದನು. "ಹೀಗಿದ್ದರೂ ಮನುಷ್ಯನ ಮನಸ್ಸು ಕೀಳು ಪ್ರಾಣಿಗಳಿಂದ ಹೊಂದಿದಷ್ಟು ಕೀಳು ಮನಸ್ಸಿನಿಂದ" ಬೆಳವಣಿಗೆ ಹೊಂದಿದೆ ಎಂಬುದನ್ನು ಅವನು ಯೋಚಿಸಿದಾಗ, "ಉನ್ನತ ಮಟ್ಟದ ತೀರ್ಮಾನಗಳಿಗೆ" ಮನುಷ್ಯನು ನಡಿಸಲ್ಪಟ್ಟವುಗಳನ್ನು ನಂಬಬಹುದೇ ಎಂಬುದರ ಬಗ್ಗೆ ಸಂಶಯ ಪಟ್ಟನು.[2] ಹೀಗೆ ಮನಸ್ಸು ಏನಾಗಿರುವುದು ಎಂಬುದನ್ನು ಅವನ ಮನಸ್ಸು ಹೇಳಿದ್ದನ್ನು ಸ್ವೀಕರಿಸುವದನ್ನು ಡಾರ್ವಿನನು ನಿರಾಕರಿಸಿದನು. ಯಾಕಂದರೆ ತನ್ನ ಮನಸ್ಸು ಹಾಗೆ ಹೇಳಲು ಸಮರ್ಥವಾಗಿದೆಯೆ ಎಂದೂ ಅವನು ಯೋಚಿಸಲಿಲ್ಲ.

ಮನಸ್ಸು ಯಾವುದರಿಂದ ರಚಿಸಲ್ಪಟ್ಟಿದೆ? ಮಾನವ ಬುದ್ಧಿವಂತಿಕೆಯ "ಮೂಲ ಕಣಗಳಿಂದ" (ಇದು ಮೂಲವನ್ನು ಅನ್ವಯಿಸುವುದೋ?), "ಕಡಿಮೆ ಗುಣದ ಮತ್ತು ಬಲಹೀನ ಉದ್ದೇಶದ" "ಮಾನಸಿಕ ಗುಣಲಕ್ಷಣಗಳೊಂದಿಗೆ ಉದ್ಭವಿಸಿದೆ ಎಂದು ಒಬ್ಬ ವಿಜ್ಞಾನಿ ಹೇಳಿದ್ದಾನೆ." ಅಂಥ ವಿಷಯಗಳು ಊಹಿಸಲ್ಪಡಬೇಕು ಇಲ್ಲದಿದ್ದರೆ, "ಯಾವುದೇ ಭೌತಿಕ ದ್ರವ್ಯದ ಪದ್ಧತಿಯಲ್ಲಿ ಪ್ರಜ್ಞೆಯು ಉದಯವಾಗುವದನ್ನು ನಾನು ತಿಳಿದುಕೊಳ್ಳಲಾರೆನು ಎಂದು ಡಾರ್ವಿನ್ ಹೇಳಿದನು."[3] ಮಾನವ ಪ್ರಜ್ಞೆಯು "ಇತಿಹಾಸ ಪೂರ್ವದ bioluminescenceದ ಶುದ್ಧೀಕರಣ ಹೊಂದಿದ ಬರುವಿಕೆಯಾಗಿದೆ" (ಇದು ಪರಿಣಾಮದ ಸೂಚನೆ) ಎಂದು ಇನ್ನೊಂದು ಕಲ್ಪನೆ ಇದೆ. ಅಂಥ ಭಾಷೆಯು ಆಳವಾದ ಪ್ರಭಾವ ಬೀರಬಹುದು, ಆದರೆ ಅದು ವಿಚಾರಿಸುವ ಮನಸ್ಸನ್ನು ಉತ್ತರಗಳಿಲ್ಲದೇ ಬಿಟ್ಟು ಬಿಡುತ್ತದೆ.

ವಿಚಾರಿಸುವ ಮನಸ್ಸಿಗೆ ರೆನೆ ಡೆಸ್ಕಾರ್ಟ್ಸ್‌ನ ಮಾತುಗಳಲ್ಲಿ (1596-1650) ಭಾಗಶಃ ಉತ್ತರವಿದೆ: "ನನ್ನ ಅಸ್ತಿತ್ವಕ್ಕೆ ಅಂತ್ಯದಲ್ಲಿ ಯಾವುದೇ ಕಾರಣವು ಹೇಳಲ್ಪಟ್ಟರೂ, ಅದು ಒಂದು ಯೋಚಿಸುವ ಸಂಗತಿಯಂತೆ ಬಿಡಲ್ಪಡತಕ್ಕದ್ದು."[4] ಜೀವಿಯು ಯೋಚಿಸುವ ಸಂಗತಿಯಾಗಿದ್ದರೆ, ನಿಶ್ಚಯವಾಗಿಯೂ ಅದರ ಸೃಷ್ಟಿಕರ್ತನು ಬಹಳಷ್ಟನ್ನು ಮಾಡಬಲ್ಲನು. "ಪರಿಣಾಮದಲ್ಲಿಯಂತೆ ಕಾರಣದಲ್ಲಿಯೂ ಅಷ್ಟೇ ವಾಸ್ತವಿಕತೆ ಇರತಕ್ಕದ್ದು"[5] ಎಂದು ಡೆಸ್ಕಾರ್ಟ್ಸ್ ಮುಂದರಿಸಿ ಹೇಳಿದನು. ಡೆಸ್ಕಾರ್ಟ್ಸ್‌ಸನಿಗಿಂತ ಹೆಚ್ಚು ಆಧುನಿಕ ವಿಚಾರಶೀಲ, ಮನುಷ್ಯನ ಜ್ಞಾನ ಮತ್ತು ವ್ಯಕ್ತಿತ್ವವು "ನಮಗೆ ಅವನ ನಿರ್ಮಾಣಿಕನ ಜ್ಞಾನವನ್ನೂ ವ್ಯಕ್ತಿತ್ವವನ್ನೂ ಪ್ರಕಟಿಸುವುದು" ಎಂದು ಬರೆದನು.[6] ಮನುಷ್ಯನು ದೇವರ ಬಗ್ಗೆ ಅರುಹುವುಳ್ಳವನಾಗಿರಬಹುದು ಆದರೆ ದೇವರು ಅವನ ಬಗ್ಗೆ

ಅರುಹುವುಳ್ಳವನಾಗಿರುವದಿಲ್ಲ ಎಂದು ಹೇಳುವುದು ಅಕಾರಣವಾದದ್ದಾಗಿದೆ. ಅರುಹಿನ ಮೂಲವು ಅರುಹು ಇಲ್ಲದೇ ಇರುವಂಥದ್ದಾಗಿರುವದಿಲ್ಲ. ಹೀಗೆ ಮಾನವ ಅರುಹು ಮತ್ತು ವ್ಯಕ್ತಿತ್ವವು ದೇವರ ವ್ಯಕ್ತಿತ್ವಕ್ಕಿಂತ ಕಡಿಮೆಯಾಗದಂಥದ್ದನ್ನು ಒಪ್ಪಿಕೊಳ್ಳುತ್ತದೆ.

## ಮನಸ್ಸಾಕ್ಷಿ

ಚಲಿಸುವ ಚಂದ್ರನು ದೇವರು ಸಜೀವಿಯಾಗಿದ್ದಾನೆಂಬುದನ್ನು ತೋರಿಸುವದಿಲ್ಲ, ಆದರೆ ಒಂದು ಮರವು ತೋರಿಸುತ್ತದೆ. ದೇವರು ಒಬ್ಬ ವ್ಯಕ್ತಿಯಾಗಿದ್ದಾನೆಂದು ಒಂದು ಮರವು ತೋರಿಸುವದಿಲ್ಲ, ಆದರೆ ಮನುಷ್ಯನ ವ್ಯಕ್ತಿತ್ವವೆ ತೋರಿಸುತ್ತದೆ. ಹಾಗೆಯೇ, ಮನುಷ್ಯನ ಮನಸ್ಸಾಕ್ಷಿಯು, ಅವನ ಕರ್ತವ್ಯ ಪ್ರಜ್ಞೆಯು ದೇವರು ಮೌಲ್ಯಗಳ ಜೀವಿ ಯಾಗಿದ್ದಾನೆಂಬುದನ್ನು ತೋರಿಸುತ್ತದೆ. ನೈತಿಕ ಮೌಲ್ಯಗಳನ್ನು ಕೊಟ್ಟಾತನು ನೈತಿಕ ವ್ಯಕ್ತಿಗಿಂತ ಕಡಿಮೆಯಾಗಿರಲಾರನು.

ಮನುಷ್ಯನ ನೈತಿಕ ಸ್ವಭಾವವು ಪ್ರಾಣಿಗಳಲ್ಲಿ ಇರುವಂತೆ ಕಂಡುಬರುವದಿಲ್ಲ. ಮಾನವ ಜೀವಿಗಳು ತಮ್ಮ ಜೀವಗಳ ಮೇಲೆ ಅರ್ಹ ಕೇಳುವಿಕೆಯ ಬಗ್ಗೆ, "ಅಧಿಕೃತವಾದ ಮತ್ತು ಪರಿಪೂರ್ಣವಾದ ಸರ್ವಾತಿಶಯವಾದ ಬೇಡಿಕೆಯ ಬಗ್ಗೆ"[7] ತಿಳಿದು ಕೊಂಡವುಗ ಳಾಗಿವೆ. ಚಿಂಪ್ಯಾಂಜಿಯು, ಮಾತನಾಡುವದಾದರೆ, "ನನಗೆ ಬೇಕು" ಎಂದು ಹೇಳು ತ್ತದೆ; ಆದರೆ ಮನುಷ್ಯನು "ನಾನು ಆಗಿರತಕ್ಕದ್ದು" ಎಂದು ಹೇಳುತ್ತಾನೆ.

ನಂಬಿಕೆಯಿಲ್ಲದ ಥೊಮಸ್ ಎಚ್. ಹಕ್ಸಲೆಯು (1825-95) ಅವನ ಮಗನು ಸತ್ತಾಗ ಅಮರತ್ವದಲ್ಲಿ ಆದರಣೆ ತೆಗೆದು ಕೊಳ್ಳುವದನ್ನು ನಿರಾಕರಿಸಿದನು. ಯಾಕಂದರೆ "ತ್ವರಿತವಾಗಿ ಆಟವಾಡಿ ಸತ್ಯದೊಂದಿಗೆ ಕಳೆದುಕೊಳ್ಳುವದನ್ನು" ಅವನು ತಿರಸ್ಕರಿಸಿದನು.[8] ಹೀಗಿದ್ದರೂ, ಹಕ್ಸಲೆಯು, ತಾನು ನಂಬಿದಂತೆ, ಕೇವಲ ಮೂಲ ಪ್ರಕೃತಿಯ ಕೆಸರಿನ ಸಂತತಿಯಾಗಿದ್ದರೆ, ಸತ್ಯವು ಯಾವ ಭಿನ್ನತೆಯನ್ನು ಮಾಡುತ್ತದೆ? ಸತ್ಯಕ್ಕೆ ಹಕ್ಸಲೆಯ ನಿಷ್ಠೆಯ ಭಾವನೆಯು ಅವನ ಮಣ್ಣಿನ ದೇಹದಿಂದ ಉದ್ಭವಿಸಲಿಲ್ಲ. ಪ್ರಾಮಾಣಿಕತೆಯು ರಾಸಾಯನಿಕಗಳ ಮೂಟೆಗೆ ತಿಳಿಯದ ಗುಣವಾ ಗಿದೆ. ಮನುಷ್ಯನಲ್ಲಿ ನೈತಿಕ ಭಾವನೆಯನ್ನು ಹಾಕಿದಾತನು ತಾನೇ ಅನೈತಿಕನಾಗಿದ್ದಾನೆ ಎಂದು ಊಹಿಸುವುದು ತರ್ಕ ಹೀನವಾದದ್ದಾಗಿದೆ.

ಬಟ್ರಾಂಡ ರಸ್ಸೆಲನು (1872-1970) ಒಳ್ಳೆಯದರ ಮತ್ತು ಕೆಟ್ಟದ್ದರ ಮನುಷ್ಯನ ಆಂತರಿಕ ವಿವೇಚನೆಯನ್ನು ಗುರುತಿಸಿದನು, ಆದರೆ ಮನುಷ್ಯನಲ್ಲಿ ವಿವೇಚನೆಯನ್ನು ಹಾಕಿದ ಬಲವು ಯೋಚಿಸುವ ಸಾಮರ್ಥ್ಯವನ್ನು ಹೊಂದಿರುವದಿಲ್ಲವೆಂದು ಅವನು ನಂಬಿದನು. "ಆ ಸೃಷ್ಟಿಯು ವಿಚಿತ್ರವಾದ ರಹಸ್ಯ, ಸರ್ವಶಕ್ತಿಯುಳ್ಳದ್ದು ಆದರೆ ಕುರುಡಾದದ್ದೂ, ... ಕೊನೆಗೆ ಒಂದು ಮಗುವನ್ನು ತಂದಿರುವುದು ... ದೃಷ್ಟಿಯೊಂದಿಗೆ, ಒಳ್ಳೆಯದರ ಮತ್ತು ಕೆಟ್ಟದ್ದರ ಅರುಹಿನೊಂದಿಗೆ, ಅವನ ಯೋಚಿಸದ ತಾಯಿಯು ಎಲ್ಲಾ ಕಾರ್ಯಗಳಿಗೆ ತೀರ್ಪುಮಾಡುವ ಸಾಮರ್ಥ್ಯದೊಂದಿಗೆ ವರ ಹೊಂದಿರುವುದು."[9] ಅವನ ಪ್ರಕಾರವಾಗಿ, ಕುರುಡಾದ, ಮನಸ್ಸಿಲ್ಲದ, ತಿಳಿಯದ ವಂಶಾವಳಿಯ ತಾಯಿಯು ನೋಡುವ, ಯೋಚಿಸುವ ಮತ್ತು ನೈತಿಕ ಮಗುವನ್ನು ಪಡೆಯುತ್ತಾಳೆ.

ಇಮ್ಮಾನುವೇಲ ಕಾಂಟನು ಅನೇಕ ಜನರನ್ನು ಆಕಾಶಗಳ ಮತ್ತು ನೈತಿಕ ನಿಯಮದ ಬಗ್ಗೆ ತನ್ನ ಹಿಡಿತದ ಉದ್ಗಾರದಿಂದ ಪ್ರಭಾವಿತಗೊಳಿಸಿದನು. "ಎರಡು ಸಂಗತಿಗಳು ಹೆಚ್ಚುತ್ತಿರುವ ಮೆಚ್ಚಿಕೆಯಿಂದಲೂ ಭಯಭಕ್ತಿಯಿಂದಲೂ ಸತತವಾಗಿ ನನ್ನನ್ನು ತುಂಬಿ ಕೊಳ್ಳುತ್ತವೆ, ನಾನು ಅವುಗಳ ಮೇಲೆ ದೀರ್ಘವಾಗಿಯೂ ಹೆಚ್ಚು ಯಥಾರ್ಥತೆಯಿಂದಲೂ ಪ್ರತಿಬಿಂಬಿಸುವಾಗ - ಹೊರಗಿರುವ ನಕ್ಷತ್ರಗಳ ಆಕಾಶಗಳ

ಮೇಲೆ ಮತ್ತು ಒಳಗಿರುವ ನೈತಿಕ ನಿಯಮದ ಮೇಲೆ.'' ಕಾಂಟನು ಮನುಷ್ಯನ "ಕರ್ತವ್ಯ ಬದ್ಧನಾಗಿರುವ'' ಸ್ಪಷ್ಟವಾದ ಅಗತ್ಯತೆಯನ್ನು ಬಹಳ ಮಹತ್ವದ್ದನ್ನಾಗಿ ಯೋಚಿಸಿ, ಅದನ್ನು ದೇವರ ಅಸ್ತಿತ್ವಕ್ಕೆ ರುಜುವಾತನ್ನಾಗಿ ಮಾಡಿದನು. ದೇವರ ಅಸ್ತಿತ್ವಕ್ಕಾಗಿದ್ದ ಶಾಸ್ತ್ರೀಯವಾದ ವಾದಗಳನ್ನು ಅವನು ಖಂಡಿಸಿದರೂ ಮನುಷ್ಯನ ನೈತಿಕ ಒಳ್ಳೆಯತನದ ಪೂರ್ಣತೆಯನ್ನು ಎತ್ತಿಹಿಡಿದನು ಮತ್ತು ಅದರಿಂದ ಅವನ ಆನಂದಕ್ಕೆ "ಈ ಪರಿಣಾಮಕ್ಕೆ ಸಾಕಷ್ಟಾಗಿರುವ ಕಾರಣದ ಅಸ್ತಿತ್ವವು,'' ಒಂದು "ಬುದ್ಧಿಯು (ವಿವೇಚಿಸುವ ಜೀವಿಯು),'' ಒಂದು "ಅತೀ ಶ್ರೇಷ್ಠ ಬುದ್ಧಿಯು'' ಅವಶ್ಯವಾಗಿತ್ತು.[10]

ಭಾವನೆಯ ಜಗತ್ತನ್ನು ದಾಟಿ ಶುದ್ಧ ನೈತಿಕ ತತ್ವಗಳ ಕಡೆಗೆ ನೋಡುತ್ತ, ಕಾರ್ಯಮಾಡುವ ಕಾರ್ಯಕಾರಣವಾದವನ್ನು ಉಪಯೋಗಿಸುವವರನ್ನು ಅವನು ದೂರಿದಂಥದ್ದನ್ನೇ ಮಾಡಿ; ಅವನು ಆ ಜೀವಿಯ ಅಸ್ತಿತ್ವವನ್ನು ಬಲವಾಗಿ ನೋಡ ಬಲ್ಲವನಾದನು. ಹೀಗಿದ್ದರೂ ಭಾವನೆಯ ಜಗತ್ತಿನ ಹಿಂದೆ ಜಗತ್ತಿನ ನಿರ್ಮಾಣಿಕನನ್ನು ನೋಡುವಲ್ಲಿ ಕಾರ್ಯಕರಣ ವಾದವನ್ನು ಉಪಯೋಗಿಸುವವರು "ದಾರ್ಶನಿಕವಾಗಿ ಸುಳ್ಳನ್ನು'' - ಸಾಧಿಸುತ್ತಿರುವದಿಲ್ಲ - ಮತ್ತು ಕಾಂಟನು ಭಾವನೆಯ ಜಗತ್ತನ್ನು ದಾಟಿ ಒಬ್ಬ ಜೀವಿಯ ಕೆಡೆಗೆ ನೋಡಿದಾಗ ನೈತಿಕ ಮನುಷ್ಯನ ಸುಖಕ್ಕೆ ಕಾರಣವಾಗುವಂತೆ ಅದರ ಅವಶ್ಯಕತೆಯ ಬಗ್ಗೆ ಹೇಳಿದಾಗ ಹಾಗೆ ಸಾಧಿಸಲಿಲ್ಲ ಎಂದು ತೋರುತ್ತದೆ. ಆ ಜೀವಿಯೊಂದಿಗೆ ಕಾಂಟನು ಪ್ರಭಾವಿತನಾಗಿದ್ದನು. ಆತನನ್ನು ಕುರಿತು "ಪರಿಶುದ್ಧ ನಿಯಮಕೊಟ್ಟವನು'' "ನ್ಯಾಯವುಳ್ಳ ನ್ಯಾಯಾಧೀಶ'' ಮತ್ತು "ಒಳ್ಳೇ ಆಡಳಿತಗಾರ'' ಎಂಬಂತೆ ಮಾತಾಡಿದನು.

ತನಗೆ "ನೈತಿಕ ಅಂತರ್ ದೃಷ್ಟಿ'' ಇದೆ ಎಂದು ಒಪ್ಪಿಕೊಂಡು, ಆದರೆ "ಮಾನಸಶಾಸ್ತ್ರದ ತೀವ್ರ ಉಲ್ಲಂಘನೆಯಲ್ಲಿ'' ತೊಡಗಿಸಿಕೊಂಡಿದ್ದ ಎಲಿಕ್ ಫ್ರಾಂಕನ ಮನೋಭಾವನೆ ಎಷ್ಟು ಭಿನ್ನವಾಗಿದೆ ಮತ್ತು ಎಷ್ಟು ಕರುಣಾಜನಕವಾಗಿದೆ.[11] "ಅಂತಿಮ ತತ್ವಕ್ಕೆ ಸಂಪೂರ್ಣವಾಗಿ ನನ್ನ ವಿರೋಧ ವ್ಯಕ್ತಪಡಿಸುತ್ತೇನೆ ಮತ್ತು ಅದನ್ನು ತಿರಸ್ಕರಿಸುತ್ತೇವೆ'' ಎಂದು ಅವನು ಘೋಷಿಸಿದನು.[12]

ಜನರಲ್ಲಿಯ ಬಲದಿಂದ ಮತ್ತು ಒಳ್ಳೇ ಚಿತ್ತದ ಮೌಲ್ಯದಿಂದ, ಮಾನವ ಕುಲಕ್ಕೆ ಸಹಾಯ ಮಾಡುವ ದೃಢ ಭಾವನೆಯಿಂದ, ವಿಶ್ವವ್ಯಾಪಿ ಎಂದು ಅವನು ನಂಬಿದ ತತ್ವಗಳ ಮೇಲೆ ಯಾವಾಗಲೂ ಕಾರ್ಯಸಾಧಿಸುವಂಥದ್ದರಿಂದ ಕಾಂಟನು ಆಳವಾಗಿ ಪ್ರಭಾವಿತನಾಗಿದ್ದನು. ವೈಯಕ್ತಿಕವಾಗಿ, ಅವನು ಜಗತ್ತಿನ ಅತ್ಯುತ್ತಮ ಮನುಷ್ಯರಲ್ಲಿ ಒಬ್ಬನಾಗಿದ್ದನು. ಹಾಗಿದ್ದರೂ, ಮೌಲ್ಯಗಳ, ಅವನ ಉನ್ನತ ಭಾವನೆಯು, ಶುದ್ಧ ಸ್ವಾರ್ಥರಹಿತತೆಯು, "ಮೃದುವಾದ, ಪಾರದರ್ಶಕ ವಿಷಯದಲ್ಲಿ,'' "ಸ್ಪಂಧಿಸುವ ಕೆಸರಿನಲ್ಲಿ'' ಇಲ್ಲವೇ "ಮೂಲ ಪ್ರಕೃತಿಯ ಕೆಸರಿನಲ್ಲಿ'' ವಿವರಣೆ ಇರುವದಿಲ್ಲ.

ಭೌತದ್ರವ್ಯವು ಒಳ್ಳೆಯತನವನ್ನೂ ದಯೆಯನ್ನೂ ಪ್ರೀತಿಯನ್ನೂ ಸೃಷ್ಟಿಸ ಬಹುದಾದರೂ, ಕ್ರೂರತೆಯಿಂದ ಹೋರಾಡುತ್ತ - ಉಳಿದುಕೊಳ್ಳುವ ಹಾಗೂ ಶಕ್ತರೇ ಉಳಿದುಕೊಳ್ಳುವ ಉತ್ಕ್ರಾಂತಿ ಜಗತ್ತಿನಲ್ಲಿ ಅವುಗಳಿಗೆ ಸ್ಥಾನವೇ ಇರುವದಿಲ್ಲ. ಮೌಲ್ಯಗಳ ಭಾವನೆಯೊಂದಿಗೆ ಇರುವ ಯಾವುದೋ ಜೀವಿಯು ಅದೇ ಭಾವನೆಯನ್ನು ಕಾಂಟನಲ್ಲಿ ಹಾಕಿತು ಎಂಬ ವಿವರಣೆಯು ಅರ್ಥವುಳ್ಳದ್ದಾಗಿದೆ. ರಾತ್ರಿಯನ್ನು ಬೆಳಕು ಹಿಂಬಾಲಿಸುವಂತೆ, ವಿಶ್ವದ ನಿರ್ಮಾಣಿಕನು ಕಟ್ಟುವವನಿಗಿಂತ ಹೆಚ್ಚಿನವ ನಾಗಿದ್ದಾನೆ; ಆತನು ಜೀವಿಸುತ್ತಿದ್ದಾನೆ, ಆತನು ಬುದ್ಧಿವಂತನಾಗಿದ್ದಾನೆ ಮತ್ತು ಆತನು ಒಳ್ಳೆಯವನಾಗಿದ್ದಾನೆ.

## ಆತನು ಯಾವ ರೀತಿಯ ದೇವರಾಗಿದ್ದಾನೆ?

"ದೇವರ ಅಗಾಧಗಳನ್ನು ಕಂಡುಕೊಳ್ಳಬಲ್ಲಿಯಾ? ಸರ್ವ ಶಕ್ತನನ್ನು ಸಂಪೂರ್ಣ ವಾಗಿ ಗ್ರಹಿಸಿಕೊಳ್ಳಬಹುದೋ?" (ಯೋಬ 11:7). ನಿರಂಕುಶತತೆಯಲ್ಲಿ, ಈ ಪ್ರಶ್ನೆಗೆ ಉತ್ತರವು ನಕಾರಾತ್ಮಕವಾದದ್ದಾಗಿರಬೇಕಾಗುತ್ತದೆ, ಯಾಕಂದರೆ ದೇವರು, "ಅಪ್ರಮೆಯ ಮಹಾ ಕಾರ್ಯಗಳನ್ನೂ ಅಸಂಖ್ಯವಾದ ಅದ್ಭುತ ಕೃತ್ಯಗಳನ್ನೂ ಮಾಡುತ್ತಾನೆ" (ಯೋಬ 5:9), ಆದಾಗ್ಯು ಒಬ್ಬನು ಹೂವುಗಳ ತೋಟದೊಳಗೆ ನಡೆದು ಹೋಗುವಾಗ, ಅವನು ತೋಟಗಾರರನ್ನು ನೋಡಿರದಿದ್ದರೂ, ಅವನು ತೋಟಗಾರನ ಬಗ್ಗೆ ನಿಶ್ಚಿತವಾದ ಸಂಗತಿಗಳನ್ನು ತಿಳಿದಿರುವನು. ಅದೇ ರೀತಿಯಲ್ಲಿ ಯಾವುದೇ ಸಾಮಾನ್ಯ ವ್ಯಕ್ತಿಯು ಆಕಾಶಗಳ ಕಡೆಗೆ ಹಗಲಿನಲ್ಲಾಗಲೀ ರಾತ್ರಿಯಲ್ಲಾಗಲೀ ದಿಟ್ಟಿಸಿ ನೋಡಿದರೆ, ಸರ್ವಶಕ್ತನಾದ ಸೃಷ್ಟಿಕರ್ತನ ಮತ್ತು ರಚಿಸಿದಾತನ ಕೈಕೆಲಸವನ್ನು ನೋಡತಕ್ಕದ್ದು (ನೋಡಿರಿ ಕೀರ್ತನೆ 19:1-3).

ಜೀವವಿಲ್ಲದ ಭೌತವಸ್ತುವಿನ ಸೃಷ್ಟಿಯಲ್ಲಿ, ಒಬ್ಬನು ಒಬ್ಬಾತನ ಇಲ್ಲವೇ ಹೆಚ್ಚು ಬಲಶಾಲಿ ಸೃಷ್ಟಿಕರ್ತನನ್ನು ನೋಡಬಹುದು. ಗ್ರಹಗಳ ಚಲನೆಯನ್ನು ನಿರ್ದೇಶಿಸುವ ಎಲ್ಲಾ ನಿಯಮಗಳ ಸ್ಪಷ್ಟವಾದ ಐಕ್ಯತೆಯಲ್ಲಿ ಸೃಷ್ಟಿಕರ್ತನು ಒಬ್ಬನಿದ್ದಾನೆ, ಒಂದು ಮನುಸ್ಸು ಎಲ್ಲವನ್ನೂ ನಿರ್ದೇಶಿಸುತ್ತದೆ, ಆತನಿಗೆ ಅಸಂಖ್ಯಾತ ಸಹಾಯಕರು ಇದ್ದಿರಲೂ ಬಹುದು ಎಂದು ಊಹಿಸಬಹುದು. ಜೀವದ ಯಾವುದೇ ರೂಪದ ಸೃಷ್ಟಿಕರ್ತನು ತಾನೇ ಜೀವದಿಂದ ಇರತಕ್ಕದೆಂದು ತಾರ್ಕಿಕವಾದ ತೀರ್ಮಾನವಾಗಿರುತ್ತದೆ. ಜೀವಿಸುವ ಜೀವಿಯು ಸ್ವಯಂ - ಅರುಹುವುಳ್ಳ ವ್ಯಕ್ತಿಯಾಗಿದ್ದರೆ, ಅವನ ಸೃಷ್ಟಿಕರ್ತನು ಆತನ ಸೃಷ್ಟಿ ಜೀವಿಗಿಂತ ಎಷ್ಟೋ ಕಡಿಮೆಯಾಗಿರಲಾರನು ಎಂದು ಹೇಳಬಹುದು. ಅದರಂತೆಯೇ, ಸ್ವಯಂ - ಅರುಹುವುಳ್ಳ ವ್ಯಕ್ತಿಗೆ ನೈತಿಕ ಗ್ರಹಿಸಿಕೊಳ್ಳುವಿಕೆ ಇದ್ದರೆ, ತನ್ನ ನಿರ್ಮಾಣಿಕನಿಗೆ ಯಾವುದೇ ಕಡಿಮೆ ಇರುವುದು ಎಂದು ಯೋಚಿಸುವುದು ತರ್ಕಬದ್ಧವಾಗಿರುವದಿಲ್ಲ, ಹಂತ ಹಂತವಾಗಿ, ವಾಸ್ತವಿಕತೆಯ ಒಂದು ಮಟ್ಟದಿಂದ ಇನ್ನೊಂದು ಮಟ್ಟಕ್ಕೆ, ಒಬ್ಬನು ತಾನು ಎಂದೂ ನೋಡಿರದ ಸೃಷ್ಟಿಕರ್ತನ ಬಗ್ಗೆ ಕಲಿತು ಕೊಳ್ಳುವನು ಮತ್ತು ಹೆಚ್ಚನ್ನು ತಿಳಿಯಲು ಹಂಬಲಿಸುವನು.

ದೇವರು ಕೇವಲ ಪ್ರೀತಿ ಇಲ್ಲವೇ ಶುದ್ಧ ಆತ್ಮಿಕತೆ ಸಂಕ್ಷಿಪ್ತ ಆದರ್ಶ (ಪ್ಲಾಟೋ) ಇಲ್ಲವೇ ಗಡ್ಡದೊಂದಿಗೆ ಇರುವ ಮುದುಕ ಅಥವಾ ಮನುಷ್ಯನ ಸೃಷ್ಟಿ (ಕ್ಸೆನೊ ಫಾನೆಸ್) ಇಲ್ಲವೇ ಮಾನವ ಮನಸ್ಸಿನ ಕಲ್ಪನೆಯಾಗಿದ್ದಾನೆ (ಲುಡ್ವಿಗ್ ಫ್ಯೂಯರಬಾಕ) ಇಲ್ಲವೇ ಅಪೇಕ್ಷಿತ ಯೋಚನೆಯಾಗಿದ್ದಾನೆ (ಸಿಗ್ಮಂಡ ಫ್ರೊಯ್ಡ) ಇಲ್ಲವೇ ಸತ್ತು ಹೋದವನಾಗಿದ್ದಾನೆ (ಫ್ರೀಡ್ರಿರ್ ನೀತ್ಸೆ) ಇಲ್ಲವೇ ನಮ್ಮ ಜೀವದ ಆಧಾರವಾಗಿದ್ದಾನೆ (ಪೌಲ ಟಿಲ್ಲಿಕ್) ಅಥವಾ ನಮ್ಮ ಬಲಹೀನತೆಗಳ ಭಾವನೆಗಳೊಂದಿಗೆ ಸ್ಪರ್ಷಿಸಲ್ಪಡಲಾಗದ ಒಬ್ಬಾತನಾಗಿದ್ದಾನೆ - ಎಂದು ಹೇಳುವವನು - ಎಲ್ಲಾ ಪುರಾವೆಗಳನ್ನು ಯೋಚಿಸಿರುವದಿಲ್ಲ. "ಕಿವಿ ಮಾಡಿದವನು ಕೇಳನೋ? ಕಣ್ಣು ಕೊಟ್ಟವನು ನೋಡನೋ?" (ಕೀರ್ತನೆ 94:9). ಮನುಷ್ಯನಲ್ಲಿ ಆಳವಾದ ಭಾವನೆಗಳನ್ನು ಇಟ್ಟಾತನು, ಭಾವಿಸಲಾರದಾತನಾಗಿರುವನೋ?

ಟಿಪ್ಪಣಿಗಳು

[1]Ivan Yefremov, “The Human Brain God Made,” *20th Century Christian* (August 1970): 8. [2]Francis Darwin, ed., *Life and Letters of Charles Darwin* (New York: D. Appleton & Co., 1911), 1:282. [3]D. F. Lawden, University of Canterbury at Christchurch, New Zealand; quoted in John Lear, “The Future of God,” *Saturday Review* (29 August 1964): 184. [4]René Descartes, *Descartes Selections,* ed. Ralph M. Eaton (New York: Charles Scribner’s Sons, 1927), 123. [5]Ibid. [6]*The Encylopedia Americana,* 1962 ed., s.v. “Theism,” by H. W. Wright. [7]John Hick, *Classical and Contemporary Readings in the Philisophy of Religion* (Englewood Cliffs, N.J.: Prentice-Hall, 1965), 471. [8]David Elton Trueblood, *Philosophy of Religion* (New York: Harper & Bros., 1957), 108. [9]Bertrand Russell, *Mysticism and Logic* (New York: Barnes & Noble, 1959), 48. [10]Immanuel Kant, “Theory of Ethics,” in *Kant Selections,* ed. Theodore Meyer Greene (New York: Charles Scribner’s Sons, 1957), 360-67.

[11]Ibid., 367. [12]Geddes MacGregor, *Introduction to Religious Philosophy* (Boston: Houghton Mifflin Co., 1959), 120.

© 2009 Truth for Today